# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಸಕಾಲ ಯೋಜನೆಯಡಿಯಲ್ಲಿ ನಿವೃತ್ತ ಇಂಜಿನಿಯರ್‌ಗಳನ್ನು (Engagement of Retired Officials) ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಬಗ್ಗೆ.

**ಓದಲಾಗಿದೆ:-** ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆದೇಶ ಸಂಖ್ಯೆ. ಸಿಆಸುಇ 08 ಈಸಪ 2011, ದಿನಾಂಕ. 15-05-2012 ಮತ್ತು ತಿದ್ದುಪಡಿ ಆದೇಶ ದಿನಾಂಕ. 15-05-2012.

*****

**ಪ್ರಸ್ತಾವನೆ:**

ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸೇವೆಗಳನ್ನು ಒದಗಿಸುತ್ತಿರುವ ಇಲಾಖೆಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ 200 ಕಿರಿಯ ಇಂಜಿನಿಯರ್ ಹುದ್ದೆಗಳನ್ನು ಹೊಸದಾಗಿ ನೇಮಕಾತಿ ಮಾಡಲು ಹಾಗೂ 200 ಕಿರಿಯ ಇಂಜಿನಿಯರ್ ಹುದ್ದೆಗಳನ್ನು ನಿವೃತ್ತ ಅಧಿಕಾರಿಗಳನ್ನು ಸಂಚಿತ ವೇತನ ಮಾಹೆಯಾನ ರೂ. 15,000/-ಕ್ಕೆ ( ಹದಿನೈದು ಸಾವಿರ ರೂಪಾಯಿಗಳು ಮಾತ್ರ) ಮೀರದಂತೆ ಒಂದು ಕಚೇರಿಗೆ ಒಬ್ಬರನ್ನು ಮಾತ್ರ ನೇಮಿಸಿಕೊಳ್ಳುವ ಷರತ್ತಿನೊಂದಿಗೆ 6 ತಿಂಗಳ ಅವಧಿಗೆ ಹೊರ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಹಾಗೂ ಈ ನೇಮಕಾತಿಗೆ ತಗಲುವ ವೆಚ್ಚವನ್ನು ಸಂಬಂಧಿತ ಇಲಾಖೆಗಳು ಕಚೇರಿ ವೆಚ್ಚದ ಲೆಕ್ಕ ಶೀರ್ಷಿಕೆಯಡಿಯಲ್ಲಿ ಭರಿಸಲು, ಅನುದಾನವು ಸಾಲದೇ ಹೋದರೆ, ಹೆಚ್ಚಿನ ಅನುದಾನವನ್ನು ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲು ಮೇಲೆ ಓದಲಾದ ದಿನಾಂಕ. 15-05-2012ರ ಆದೇಶದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಮಂಜೂರಾತಿ ನೀಡಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಮೊದಲಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ 200 ಕಿರಿಯ ಇಂಜಿನಿಯರ್ ಹುದ್ದೆಗಳನ್ನು ನಿವೃತ್ತ ಅಧಿಕಾರಿಗಳನ್ನು ಸಂಚಿತ ವೇತನ ಮಾಹೆಯಾನ ರೂ. 15,000/-ಕ್ಕೆ ( ಹದಿನೈದು ಸಾವಿರ ರೂಪಾಯಿಗಳು ಮಾತ್ರ) ಮೀರದಂತೆ ಒಂದು ಕಚೇರಿಗೆ ಒಬ್ಬರನ್ನು ಮಾತ್ರ ನೇಮಿಸಿಕೊಳ್ಳುವ ಷರತ್ತಿನೊಂದಿಗೆ 6 ತಿಂಗಳ ಅವಧಿಗೆ ಹೊರ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಸರ್ಕಾರವು ನಿರ್ಧರಿಸಿ ಕೆಳಕಂಡಂತೆ ಆದೇಶಿಸಿದೆ.

## ಆದೇಶ ಸಂಖ್ಯೆ. ಗ್ರಾಅಪ 145 ಸೇಶಿಕಾ 2012, ಬೆಂಗಳೂರು, ದಿನಾಂಕ.03-07-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಕಾರಣದಿಂದ, ಕರ್ನಾಟಕ ನಾಗರೀಕ ಸೇವೆಗಳ ಖಾತರಿ ಅಧಿನಿಯಮ 2011ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ, ಕಿರಿಯ ಇಂಜಿನಿಯರ್ ಹುದ್ದೆಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿದ್ದಂತೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಸರ್ಕಾರದ ಮಂಜೂರಾತಿ ನೀಡಲಾಗಿದೆ:-

*1) 200 ಕಿರಿಯ ಇಂಜಿನಿಯರ್ ಹುದ್ದೆಗಳನ್ನು ನಿವೃತ್ತ ಅಧಿಕಾರಿಗಳನ್ನು ತುಂಬುವ ಮೂಲಕ. ಸಂಚಿತ ವೇತನ ಮಾಹೆಯಾನ ರೂ. 15,000(ಹದಿನೈದು ಸಾವಿರ ರೂಪಾಯಿಗಳು ಮಾತ್ರ) ಮೀರದಂತೆ ನೀಡತಕ್ಕದ್ದು.*

*2) ಈ ಅವಧಿಯು ಆರು ತಿಂಗಳು ಅವಧಿಗೆ ಮಾತ್ರ ಜಾರಿಯಲ್ಲಿರುತ್ತದೆ.*

*3) ಕಿರಿಯ ಇಂಜಿನಿಯರ್‌ಗಳ ಸೇವೆಯು ಪ್ರತಿನಿತ್ಯವು ಅವಶ್ಯವಿರುವುದರಿಂದ ಪ್ರತಿ ನಿತ್ಯವು ಕಚೇರಿಗೆ ಹಾಜರಾಗತಕ್ಕದ್ದು*

*4) ಈ ರೀತಿಯಲ್ಲಿ ಪ್ರತಿನಿತ್ಯವು ಕಛೇರಿಗೆ ಹಾಜರಾಗುವುದರಿಂದ ಸಾಂಧರ್ಬಿಕ ರಜೆ ಪಡೆಯಲು ಅರ್ಹರಿರುತ್ತಾರೆ.*

----2

*5) ನೇಮಕಾತಿ ಮಾಡುವ ಸಂದರ್ಭದಲ್ಲಿ ಅವರುಗಳು ಸಾರ್ವಜನಿಕ ಸೇವೆಯಲ್ಲಿ ಉತ್ತಮ ಸ್ಪಂದನೆ ಹೊಂದಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.*

*6) ಇಂತಹ ನಿವೃತ್ತಿ ವ್ಯಕ್ತಿಗಳ ವಯಸ್ಸು 65ಕ್ಕಿಂತ ಮೀರಿರಬಾರದು.*

ಮೇಲ್ಕಂಡ ನೇಮಕಾತಿಯನ್ನು 15 ದಿನಗಳೊಳಗೆ ಪೂರ್ಣಗೊಳಿಸತಕ್ಕದ್ದು.

2. ಸದರಿ ಕಿರಿಯ ಇಂಜಿನಿಯರ್ ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಸಮಿತಿಯ ಮೂಲಕ ನೇಮಕಾತಿ ಮಾಡಿಕೊಳತಕ್ಕದ್ದು:-

*1) ಸಂಬಂಧಪಟ್ಟ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,*
*2) ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್‌ಗಳು,*
*3) ಸಂಬಂಧಪಟ್ಟ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಂಸ್ಥೆ ಪ್ರತಿನಿಧಿ.*

3. ಮೇಲ್ಕಂಡ ನೇಮಕಾತಿಯನ್ನು ಪ್ರಮುಖ ಎರಡು ದಿನ ಪತ್ರಿಕೆಗಳಲ್ಲಿ ಆಹ್ವಾನಿಸಿ, ಪ್ರಕಟಿಸುವುದು.

4. ಈ ನೇಮಕಾತಿಗೆ ತಗಲುವ ವೆಚ್ಚವನ್ನು ಇಲಾಖೆಯ ಕಚೇರಿ ವೆಚ್ಚದ ಲೆಕ್ಕ ಶೀರ್ಷಿಕೆಯಡಿಯಲ್ಲಿ ಭರಿಸುವುದು. ಒಂದು ವೇಳೆ ಅನುದಾನವು ಸಾಲದೇ ಹೋದರೆ, ಹೆಚ್ಚಿನ ಅನುದಾನವನ್ನು ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೋರತಕ್ಕದ್ದು.

5. ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ - ನಾಗರೀಕ ಸೇವೆಗಳು) ನೀಡಿರುವ ಆದೇಶ ಸಂಖ್ಯೆ. ಸಿಆಸುಇ 08 ಈಸಪ 2011, ದಿನಾಂಕ. 15-05-2012ರಲ್ಲಿ ಅಭಿಪ್ರಾಯದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

3/7/12
(ಎನ್.ವೈ.ಸಾಗರ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

3/7/12

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಆಯವ್ಯಯ ಮತ್ತು ಸಂಪನ್ಮೂಲ), ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ - ನಾಗರೀಕ ಸೇವೆಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ರಿಸಾಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು,
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ , ರಾಮನಗರ/ತುಮಕೂರು/ ದಾವಣಗೆರೆ/ಶಿವಮೊಗ್ಗ/ಮಂಡ್ಯ/ಹಾಸನ/ಮಂಗಳೂರು/ಉಡುಪಿ/ಚಿಕ್ಕಮಗಳೂರು/ಕಾರವಾರ/ ಹಾವೇರಿ/ಬಳ್ಳಾರಿ/ಕೊಪ್ಪಳ/ಚಾಮರಾಜನಗರ.
6. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ/ತುಮಕೂರು/ ದಾವಣಗೆರೆ/ಶಿವಮೊಗ್ಗ/ಮಂಡ್ಯ/ಹಾಸನ/ಮಂಗಳೂರು/ಉಡುಪಿ/ ಚಿಕ್ಕಮಗಳೂರು /ಕಾರವಾರ/ ಹಾವೇರಿ/ಬಳ್ಳಾರಿ/ಕೊಪ್ಪಳ/ಚಾಮರಾಜನಗರ.
7. ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
8. ಗ್ರಾ.ಅ.ಪಂ.ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ/ ಉಪ ಕಾರ್ಯದರ್ಶಿ ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
9. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
10. ರಕ್ಷಾ ಕಡತ / ಮಾಹಿತಿ ಕೇಂದ್ರ/ ಹೆಚ್ಚುವರಿ ಪ್ರತಿಗಳು.

ಅನುಬಂಧ

ಈ ಕೆಳಕಂಡ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಡಿಯಲ್ಲಿ ಬರುವ ಖಾಲಿ ಇರುವ ಕಿರಿಯ ಇಂಜಿನಿಯರ್ ಹುದ್ದೆಗಳ ಪಟ್ಟಿ

(ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 145 ಸೇಶಿಕಾ 2012, ದಿನಾಂಕ. 3-7-2012)

| ಕ್ರಮ ಸಂಖ್ಯೆ | ವಿಭಾಗದ ಹೆಸರು | ಖಾಲಿ ಹುದ್ದೆಗಳ ಸಂಖ್ಯೆ |
|---|---|---|
| 1. | ರಾಮನಗರ | 10 |
| 2. | ತುಮಕೂರು | 10 |
| 3. | ದಾವಣಗೆರೆ | 08 |
| 4. | ಚಿತ್ರದುರ್ಗ | 09 |
| 5. | ಸಾಗರ | 17 |
| 6. | ಶಿವಮೊಗ್ಗ | 13 |
| 7. | ಮಂಡ್ಯ | 11 |
| 8. | ಹಾಸನ | 11 |
| 9. | ಮಂಗಳೂರು | 18 |
| 10. | ಉಡುಪಿ | 10 |
| 11. | ಚಿಕ್ಕಮಗಳೂರು | 24 |
| 12. | ಕಾರವಾರ | 13 |
| 13. | ಹಾವೇರಿ | 13 |
| 14. | ಬಳ್ಳಾರಿ | 08 |
| 15. | ಕೊಪ್ಪಳ | 09 |
| 16. | ಚಾಮರಾಜನಗರ | 08 |
| 17. | ಚನ್ನರಾಯಪಟ್ಟಣ | 08 |
| | ಒಟ್ಟು: | 200 |

3/7/12

(ಎನ್.ವೈ.ಸಾಗರ)

ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

3/7